## ಕಳೆದ ಸಂಚಿಕೆಯಲ್ಲಿ



ಲಾರ್ಸ್‌ನೊಂದಿಗಿನ ಸಂಬಂಧ ಕಡಿದುಕೊಂಡು ದುರ್ಬಲ ಮತ್ತು ಅಸಹಾಯಕ ಮಹಿಳೆಯರ ಆಶ್ರಯತಾಣ ಸೇರಿಕೊಂಡ ನ್ಯಾನ್ಸಿ, ಆ ಕೇಂದ್ರದಲ್ಲಿನ ಹೆಣ್ಣುಮಕ್ಕಳ ಸಂಕಟದ ಕಥೆಗಳನ್ನು ಕೇಳಿ ಕಣ್ಣೀರಾದಳು. ಪ್ರತಿ ಮುಖದ ಹಿಂದೆಯೂ ಒಂದೊಂದು ನಿಟ್ಟುಸಿರಿನ ಸಾಗರ. ಗಂಡಿನ ಕ್ರೌರ್ಯ, ದಬ್ಬಾಳಿಕೆಯ ಕಥನ. ಆ ಕೇಂದ್ರದಲ್ಲೂ ಹೆಚ್ಚುದಿನ ಇರಲಾಗದ ನ್ಯಾನ್ಸಿಗೆ, ಒಂಟಿ ಅನ್ನಿಸಿದ ಕ್ಷಣದಲ್ಲಿ ನೆನಪಾದುದು ತವರಿನ ಹಾದಿ. ಒಂಟಿ ಹಕ್ಕಿ ಮತ್ತೆ ಭಾರತದ, ಮಲಪ್ಪುರಂನ ದಾರಿ ಹಿಡಿದು ಅಪ್ಪನ ರೆಕ್ಕೆಯ ಕಕ್ಷೆಯಲ್ಲಿ ಸುರಕ್ಷಿತವಾಗಿರಲು ಬಯಸಿತು. ಅಲ್ಲಿ ಅಪ್ಪ ಒಂಟಿಯಾಗಿದ್ದರು. ವೃದ್ಧಾಪ್ಯದಿಂದ ಚಡಪಡಿಸುತ್ತಿದ್ದರು. ಸಂಜೆಬದುಕಿನ ಅಪ್ಪನಿಗೆ ನ್ಯಾನ್ಸಿ ಊರುಗೋಲಾದಳು. ತವರಿನಲ್ಲಿ ಪರಿಸ್ಥಿತಿ ಬದಲಾಗಿತ್ತು. ಅನೇಕ ವರ್ಷಗಳ ಕಾಲ ಮುನಿಸಿಕೊಂಡಿದ್ದ ನೆರೆಮನೆಯ ಅಸರಫ್ ಅಂಕಲ್ ಮತ್ತು ರೂಬಿ ಆಂಟಿ ಈಗ ಬದಲಾದ ಸಂದರ್ಭದಲ್ಲಿ ತಮ್ಮ ಸಿಟ್ಟು ಮರೆತಿದ್ದರು. ನೀಲ್‌ನ ಸಾವು ಸಿಟ್ಟಿನ ಜಾಗದಲ್ಲಿ ಕರುಣೆಯನ್ನು ಮೂಡಿಸಿತ್ತು.

ಹೆಚ್ಚು ಓದಲಿಲ್ಲ. ಅವನು ಬಾಲ್ಯದಲ್ಲಿಯೇ ಕಾರುಗಳ ಬಗ್ಗೆ ಆಕರ್ಷಿತನಾದ, ಹೀಗಾಗಿ ಕಾರ್ ಡೀಲರ್ ಆದ. ಕಾರು ಖರೀದಿಸುವುದು ಮತ್ತು ಮಾರುವುದು ಅವನ ಬಿಜಿನೆಸ್ ಆಗಿತ್ತು. ನಿಶ್ಚಿತ ಆದಾಯವಿರಲಿಲ್ಲ. ಒಮ್ಮೊಮ್ಮೆ ಮನಸಾರೆ ಸಂಪಾದಿಸಿದರೆ, ಒಮ್ಮೊಮ್ಮೆ ಬರಿಗೈಯಲ್ಲಿರುತ್ತಿದ್ದ. ಅವನ ಹೆಂಡತಿ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ನರ್ಸ್ ಆಗಿದ್ದಳು. ಅವಳಿಗೆ ಸಾಮಾನ್ಯ ವೇತನ ಸಿಗುತ್ತಿತ್ತು. ಹೇಗೋ ಜೀವನ ಸಾಗುತ್ತಿತ್ತು.

ಮತ್ತೊಂದು ದುರದೃಷ್ಟವೆಂದರೆ, ಅವರ ಪತಿಗೆ ಲಕ್ವಾ ಹೊಡೆದಿತ್ತು. ಅವರಿಂದ ನಡೆಯಲು ಸಾಧ್ಯವಾಗುತ್ತಿರಲಿಲ್ಲ, ನಾಲಿಗೆ ಸಹ ಸ್ವಾಧೀನವನ್ನು ಕಳೆದುಕೊಂಡಿತ್ತು. ಅವರು ತಮ್ಮ ಚಿಕ್ಕ ಚಿಕ್ಕ ಅವಶ್ಯಕತೆಗಳಿಗೂ ಇನ್ನೊಬ್ಬರನ್ನು ಆಶ್ರಯಿಸಬೇಕಿತ್ತು. ಪರಿವಾರದಲ್ಲಿ ಸೊಸೆ–ಮಗ ತುಂಬಾ ವ್ಯಸ್ತರಾಗಿರುತ್ತಿದ್ದರು, ಹೀಗಾಗಿ ಕುಂಜಮ್ಮಾ ಖುದ್ದು ಪತಿಯನ್ನು ನೋಡಿಕೊಳ್ಳಬೇಕಿತ್ತು. ನಿತ್ಯಕರ್ಮದಿಂದ ಹಿಡಿದು ಅವರ ಊಟೋಪಚಾರವನ್ನು ನೋಡಿಕೊಳ್ಳಬೇಕಿತ್ತು. ಅವರಿಗೆ ಔಷದಿಯನ್ನೂ ಕುಡಿಸಬೇಕಿತ್ತು. ಕುಂಜಮ್ಮಾ ತಮ್ಮ ಪೂರ್ಣ ನಿಷ್ಠೆ ಮತ್ತು ಪ್ರೀತಿಯಿಂದ ಪತ್ನಿ ಧರ್ಮವನ್ನು ನಿರ್ವಹಿಸುತ್ತಿದ್ದರು.

ಅಂದು ನಾನು ಅವರ ಮನೆಗೆ ಹೋದಾಗ ಕುಂಜಮ್ಮಾ ತಮ್ಮ ಪತಿಗೆ ಸ್ನಾನ ಮಾಡಿಸುವ ಸಿದ್ಧತೆಯಲ್ಲಿ ತೊಡಗಿದ್ದರು. ನಾನು ಅವರ ದಿನಚರಿಯನ್ನು ನೋಡುತ್ತಿದ್ದೆ. ಅವರ ಪತಿಯನ್ನು ನಾವು ಅಮ್ಮಾಚನ್ ಎಂದು ಕರೆಯುತ್ತಿದ್ದೆವು. ಏಕೆಂದು ಗೊತ್ತಿಲ್ಲ. ಹಾಗೆ ಕೇಳಿದರೆ, ನನಗೆ ಅವರ ಹೆಸರೂ ಗೊತ್ತಿರಲಿಲ್ಲ. ಅಪ್ಪ ಕುಂಜಮ್ಮಾರ ಹೆಸರನ್ನು ಹೇಳಿದಾಗ, ಅವರ ಹೆಸರು ಸೂಜನ್ ಎಂದು ತಿಳಿಯುತ್ತಿತ್ತು. ನನಗೆ ಭಾರತದಲ್ಲಿರುವ ನಮ್ಮ ಸಂಬಂಧಿಕರ ಹೆಸರು ಗೊತ್ತಿರಲಿಲ್ಲ, ಆದರೆ ಡೆನ್ಮಾರ್ಕ್‌ನಲ್ಲಿ ಲಾರ್ಸ್ ಸಂಬಂಧಿಕರ ಹೆಸರುಗಳೆಲ್ಲವೂ ನನಗೆ ಬಾಯಿಪಾಠವಾಗಿದ್ದವು. ಅವನ ತಾಯಿ ಲಾರಾ, ತಂದೆ ಡೇನಿಯಲ್, ಮಾವ ಫಿಲಿಪ್, ಅಜ್ಜಿ ಗ್ರೇಥಾ, ಮಾವನ ದಿವಂಗತ ಹೆಂಡತಿ ಕಮಿಲಾ... ಹೀಗೆ ಎಲ್ಲರ ಹೆಸರು ಗೊತ್ತಿತ್ತು. ಅಲ್ಲಿ ತಂದೆ ಮತ್ತು ತಾಯಿಯನ್ನು ಹೊರತುಪಡಿಸಿ ಎಲ್ಲರ ಹೆಸರನ್ನು ಹೇಳಲಾಗುತ್ತದೆ. ಅತ್ತೆ–ಮಾವ, ಚಿಕ್ಕಮ್ಮ–ಚಿಕ್ಕಪ್ಪ, ದೊಡ್ಡಮ್ಮ–ದೊಡ್ಡಪ್ಪ, ಎಲ್ಲರನ್ನೂ ಅವರ ಮೊದಲ ಹೆಸರಿನಿಂದ ಕರೆಯಲಾಗುತ್ತದೆ.

ಅಮ್ಮಾಚನ್ ಅಂದರೆ ಕುಂಜಮ್ಮಾರ ಪತಿ ಮಗುವಿನಂತಾಗಿದ್ದರು. ಕುಂಜಮ್ಮಾ ಬಿಸಿ ನೀರಿಗೆ ತಣ್ಣನೆಯ ನೀರು ಬೆರೆಸಿದರೆ ನೀರು ತುಂಬಾ ತಣ್ಣಗಾಯಿತು; ನಾನು ಈ ಬಟ್ಟೆಯನ್ನು ಹಾಕಿಕೊಳ್ಳಲ್ಲ, ಆ ಬಟ್ಟೆಯನ್ನು ಹಾಕಿಕೊಳ್ತೇನೆ... ಎಂದೆಲ್ಲಾ ಹಟ ಮಾಡುತ್ತಿದ್ದರು.

ನಾಲಿಗೆ ಮಾತಿನ ಶಕ್ತಿಯನ್ನು ಕಳೆದುಕೊಂಡಿತ್ತು, ಆದರೆ ತುಂಟಾಟಕ್ಕೆ ಕೊರತೆಯಿರಲಿಲ್ಲ. ಕುಂಜಮ್ಮಾ ಪತಿಯ ಬಗ್ಗೆ ರೇಗದೆ ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತಿದ್ದರು. ಅವರು ಪತಿಗೆ ಸ್ನಾನ ಮಾಡಿಸಿದ ನಂತರ, ಬಟ್ಟೆ ತೊಡಿಸಿದರು, ಪೌಡರನ್ನು ಸಿಂಪಡಿಸಿದರು, ತಲೆಯನ್ನು ಬಾಚಿದರು. ಡೈನಿಂಗ್ ಟೇಬಲ್ ಮೇಲೆ ಕೂರಿಸಿ, ತಿಂಡಿ ಕೊಟ್ಟರು. ಔಷಧಿಗಳನ್ನು ಕುಡಿಸಿದರು. ನಂತರ ಟಿ.ವಿ. ಎದುರು ಕೂರಿಸಿ ಟಿ.ವಿ. ಆನ್ ಮಾಡಿದರು. ಒಂದು ರಗ್ಗು ಹೊದೆಸಿದರು. ಇಷ್ಟೆಲ್ಲಾ ಮಾಡಿದ ನಂತರ ಅವರಿಗೆ ದಣಿವಾಯಿತು. ಸುಮಾರು ಒಂದೂವರೆ ಗಂಟೆಯ ನಂತರ ವಿಶ್ರಾಂತಿ ಪಡೆಯಲು ಕೂತರು.

'ಕುಂಜಮ್ಮಾ, ಅಮ್ಮಾಚನ್‌ರನ್ನು ನೋಡಿಕೊಳ್ಳಲು ಒಬ್ಬ ಹೆಲ್ಪರ್ ಇಟ್ಟುಕೊಳ್ಳಿ. ನಿಮಗೆ ಹೆಚ್ಚು ಕೆಲಸವಾಗುತ್ತದೆ' ನಾನು ಸಲಹೆಯಿತ್ತೆ.

'ಪ್ರತಿಯೊಂದಕ್ಕೂ ಹಣ ಬೇಕು, ಮಗಳೇ. ಈಚೆಗೆ ಮನೆಯ ಕೆಲಸಗಾರರು ಸಹ ದುಬಾರಿಯಾಗಿದ್ದಾರೆ. ಅಲ್ಲದೆ, ನಾನು ನನ್ನ ಕೈಯಾರೆ ನನ್ನ ಪತಿಯ ಸೇವೆಯನ್ನು ಮಾಡಲು ಬಯಸುತ್ತೇನೆ. ನನಗೆ ದಿನವಿಡೀ ಏನು ಕೆಲಸವಿದೆ...?'

'ಕುಂಜಮ್ಮಾ ನೀವು ತುಂಬಾ ದೊಡ್ಡವರು...'

'ಮಗಳೇ, ನಮ್ಮ ಪೀಳಿಗೆಯವರೆಲ್ಲರೂ ಹೀಗೆಯೇ ಇದ್ದರು; ನಮಗೆ ಸೇವೆ ಮಾಡುವುದರಲ್ಲಿ ನಂಬಿಕೆಯಿದೆ. 'ಐ ಲವ್ ಯೂ...ಬಟ್ ಐ ಡೋಂಟ್ ಸರ್ವ್ ಯೂ...' ಇದು ಇಂದಿನ ಪೀಳಿಗೆ...'

ನಾನು ನಕ್ಕೆ. ಕುಂಜಮ್ಮಾರಿಗೂ ನಗು ಬಂತು.

ನಮ್ಮ ನಗು, ಅಮ್ಮಾಚನ್‌ರ ಟಿ.ವಿ. ಕಾರ್ಯಕ್ರಮಕ್ಕೆ ಅಡ್ಡಿಯಾಯಿತು.

'ಹೇಂ...ಹೇಂ...' ಎನ್ನುತ್ತಾ ನಮಗೆ ಸುಮ್ಮನಿರುವಂತೆ ಸಂಜ್ಞೆ ಮಾಡಿದರು.

'ವೈವಾಹಿಕ ಸಂಸ್ಥೆ ಅದೆಷ್ಟು ದುರ್ಬಲವಾಗುತ್ತಿದೆ!' ಕುಂಜಮ್ಮಾ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

'ವೈವಾಹಿಕ ಸಂಸ್ಥೆ ಸಹ ಪರಿವರ್ತನೆಯಿಂದ ಹೊರಗಿರಲು ಸಾಧ್ಯವಿಲ್ಲ' ಎಂದೆ ನಾನು.

'ನ್ಯಾನ್ಸಿ, ನಡಿ, ನಾವು ಆ ಕಡೆ ಕೂರೋಣ' ಕುಂಜಮ್ಮಾ ಇನ್ನೊಂದು ಕೋಣೆಯೆಡೆಗೆ ಸಂಜ್ಞೆ ಮಾಡಿದರು. ನಾನು ಅಮ್ಮಾಚನ್‌ರನ್ನು ನೋಡಿದೆ.

'ಇವರ ಸ್ನಾನ, ತಿಂಡಿ ಆಯ್ತು. ಇನ್ನು ಟಿ.ವಿ. ಯನ್ನು ನೋಡ್ತಾ ನಿದ್ರೆಯನ್ನು ಮಾಡ್ತಾರೆ.'

ಸ್ವಲ್ಪ ಹೊತ್ತಿಗೆ ಅಮ್ಮಾಚನ್ ತೂಕಡಿಸಿದರು.

ನಾನು ಮತ್ತು ಕುಂಜಮ್ಮಾ ಅವರ ಬೆಡ್‌ರೂಮಿಗೆ ಬಂದೆವು.

'ನಿಮ್ಮ ಅಪ್ಪಾ ಹೇಗಿದ್ದಾರೆ?' ಕುಂಜಮ್ಮಾ ಆ ರೂಮಿಗೆ ಬಂದ ಕೂಡಲೇ ವಿಚಾರಿಸಿದರು.

'ಚೆನ್ನಾಗಿದ್ದಾರೆ...'

'ನಮಗೆ ಅವರ ದರ್ಶನವೇ ಕಷ್ಟವಾಗಿದೆ. ನನ್ನ ಪತಿಗೆ ಸ್ಟ್ರೋಕ್ ಆಯ್ತು. ಅವರನ್ನು ನೋಡಲು ಇಡೀ ಮೊಹಲ್ಲಾ ಬಂತು. ನಿಮ್ಮಪ್ಪ ನೋಡಲು ಬರಲಿಲ್ಲ, ಫೋನ್ ಸಹ ಮಾಡಲಿಲ್ಲ. ನಿನ್ನ ಅಮ್ಮ ಸತ್ತಾಗ, ಪತಾಂಬಿಯಲ್ಲಿದ್ದ ನನ್ನ ಮನೆ–ಮಠವನ್ನೆಲ್ಲಾ ಮಾರಿ ಇಲ್ಲಿಗೆ ಬಂದಿದ್ದೆ.'

ನಾನು ಮಾತನಾಡಲಿಲ್ಲ.

'ನೀವು ಚಿಕ್ಕವರಿದ್ದಾಗ, ನಿಮಗೆ ನನ್ನ ಅವಶ್ಯಕತೆಯಿತ್ತು. ದೊಡ್ಡವರಾದಿರಿ, ಸಂಪಾದನೆ ಮಾಡಲು ಹೋದಿರಿ... ನಿಮಗೆ ನನ್ನ ಅವಶ್ಯಕತೆಯಿಲ್ಲ... ನೀವೆಲ್ಲರೂ ನಿಮ್ಮ ಕುಂಜಮ್ಮಾಳನ್ನು ಮರೆತಿರಿ.'

'ಕುಂಜಮ್ಮಾ, ನಾವು ನಿಮ್ಮನ್ನು ಮರೆತಿಲ್ಲ. ನಾವು ದೊಡ್ಡವರಾದೆವು, ನಮ್ಮ ನಮ್ಮ ಕಷ್ಟಗಳಲ್ಲಿ ಸಿಲುಕಿದೆವು.'

'ನೀನು ಮತ್ತು ರೇಚಲ್ ನನ್ನನ್ನು ಭೇಟಿಯಾಗಲು ಬರ್ತೀರ. ಜಾರ್ಜ್ ಬಂದಾಗ, ನನ್ನನ್ನು ಭೇಟಿಯಾಗುವ ಮಾತಿರಲಿ, ನನ್ನನ್ನು